# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ:08192–208029, ಫ್ಯಾಕ್ಸ್:08192–208008


**: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಂ :**

**ಸಂಖ್ಯೆ:ದಾವಿವಿ/ಶೈ/184/2020–21** / 5075 **ದಿನಾಂಕ:08.02.2021**

## :ಅಧಿಸೂಚನೆ–2:

**ವಿಷಯ:** **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ (MBA) ಅಧ್ಯಯನ ವಿಭಾಗದಲ್ಲಿ 2020–21ನೇ ಶೈಕ್ಷಣಿಕ ಸಾಲಿಗೆ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡುವ ಕುರಿತು.**

**ಉಲ್ಲೇಖ:** **ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.02.2021.**

******

ವಿಶ್ವವಿದ್ಯಾನಿಲಯದ 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡುವ ಸಂಬಂಧ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸೀಟು ಹಂಚಿಕೆ, ಪ್ರವೇಶ ಪರೀಕ್ಷೆ ಹಾಗೂ ಇತರೆ ಪ್ರಕ್ರಿಯೆಗಳನ್ನು ಈ ಕೆಳಕಂಡ ವಿಧಾನದಲ್ಲಿ ಭರ್ತಿ ಮಾಡಲಾಗುವುದು.

| ಕ್ರ.ಸಂ. | ವಿವರ | **ಪ್ರವೇಶಾತಿ ದಿನಾಂಕ** |
|---|---|---|
| 1 | **ಪ್ರವೇಶ ಅರ್ಜಿ ವಿತರಿಸುವ ದಿನಾಂಕ** (Date of Application Issuing) | 08.02.2021 |
| 2 | **ಪ್ರವೇಶ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** (Last Date for submission of Application) | 11.02.2021 |
| 3 | **ಪ್ರವೇಶ ಪರೀಕ್ಷಾ ದಿನಾಂಕ & ಪ್ರವೇಶಾತಿ ದಿನಾಂಕ** (Entrance Exam Date & Admission Date) | 12.02.2021 |

**ನಿಬಂಧನೆಗಳು:**

1. ಯು.ಜಿ.ಸಿ.ಯಿಂದ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರು ಪ್ರವೇಶ ಪರೀಕ್ಷೆಗೆ ಅರ್ಹರಾಗಿರುತ್ತಾರೆ.
2. ಪ್ರವೇಶ ಪರೀಕ್ಷೆಗೆ ಸಾಮಾನ್ಯ/ಓಬಿಸಿ ವರ್ಗದ ವಿದ್ಯಾರ್ಥಿಗಳು **ಶೇ.50ರಷ್ಟು** ಹಾಗೂ ಪ.ಜಾ/ಪ.ಪಂ/ಪ್ರವರ್ಗ–1ರ ವಿದ್ಯಾರ್ಥಿಗಳು **ಶೇ.45ರಷ್ಟು** ಅಂಕಗಳನ್ನು ಪಡೆದಿರಬೇಕು.
3. ಅರ್ಜಿ ಮತ್ತು ಪ್ರವೇಶ ಪರೀಕ್ಷೆ ಶುಲ್ಕ ಸಾಮಾನ್ಯ/ಓಬಿಸಿ ವರ್ಗದವರಿಗೆ **ರೂ.965/–** ಮತ್ತು ಪ.ಜಾ/ಪ.ಪಂ/ಪ್ರವರ್ಗ–1ರ ವಿದ್ಯಾರ್ಥಿಗಳಿಗೆ **ರೂ.490/–**ಗಳನ್ನು ನಿಗದಿಪಡಿಸಲಾಗಿದೆ.
4. ನಿಗದಿತ ಶುಲ್ಕವನ್ನು ಡಿಡಿ/ಚಲನ್ ಮೂಲಕ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರ ಪದನಾಮದಲ್ಲಿ ಪಡೆದು ಅರ್ಜಿಗೆ ಲಗತ್ತಿಸತಕ್ಕದ್ದು.
5. ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಶೈಕ್ಷಣಿಕ ದಾಖಲೆಗಳನ್ನು/ಜಾತಿ ಪ್ರಮಾಣ ಪತ್ರದ ಪ್ರತಿಗಳನ್ನು ಅರ್ಜಿಗಳಿಗೆ ಲಗತ್ತಿಸುವುದು.
6. ಪ್ರವೇಶಾತಿ ಪ್ರಕ್ರಿಯೆಗಳನ್ನು ವಿಶ್ವವಿದ್ಯಾನಿಲಯದ ಪ್ರವೇಶಾತಿ ನಿಯಮಗಳನುಸಾರ ಮೆರಿಟ್ ಕಮ್ ರೋಸ್ಟರ್ (Merit cum Roaster) ಅನುಗುಣವಾಗಿ ಮಾಡಲಾಗುವುದು.

**ಸೂಚನೆಗಳು:**

1. **ಪ್ರವೇಶ ಪರೀಕ್ಷೆಯ ಸಮಯ ಬೆಳಿಗ್ಗೆ 11:30 ರಿಂದ ಮಧ್ಯಾಹ್ನ 12:30 ರವರೆಗೆ ಫಲಿತಾಂಶದ ಸಮಯ ಮಧ್ಯಾಹ್ನ 2:00ಗಂಟೆಗೆ.**
2. **ದಿನಾಂಕ:12.02.2021ರಂದು ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುವುದು.**
3. **ಹೆಚ್ಚಿನ ಮಾಹಿತಿಗಾಗಿ ಎಂ.ಬಿ.ಎ ವಿಭಾಗದ ಅಧ್ಯಕ್ಷರನ್ನು ಸಂಪರ್ಕಿಸಬಹುದು.** ದೂರವಾಣಿ ಸಂಖ್ಯೆ:9008666889

ಆದೇಶಾನುಸಾರ,

08/2/2021

**ಕುಲಸಚಿವ**

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**"ಕೊರೊನಾ ಹರಡುವಿಕೆಯನ್ನು ತಡೆಗಟ್ಟಲು ಮಾಸ್ಕ್ ಧರಿಸಿ".**